


'ಒರಿಸ್ಸಾ ಸ್ಟೇಟ್ ಮ್ಯೂಸಿಯಂ'ನ ಮಾನವಶಾಸ್ತ್ರ ವಿಭಾಗ



ಪುರಿ ಜಗನ್ನಾಥ ವಿಭಾಗ; ದೇವರ ವಿವಿಧ ಅಲಂಕಾರ ಮತ್ತು ರಥಯಾತ್ರೆಯ ಪ್ರದರ್ಶನದ ಗ್ಯಾಲರಿ



ಕಲಾಭೂಮಿ ಮ್ಯೂಸಿಯಂ 'ಟೆರ್ರಾಕೋಟಾ ಗ್ಯಾಲರಿ'

ಸಾವಿರಕ್ಕೂ ಅಧಿಕ ತಾಳೆಗರಿಗಳ ಸಂಗ್ರಹವಿದೆ. ಈ ತಾಡೋಲೆಗಳಲ್ಲಿ ತಂತ್ರ, ವೇದ, ಧರ್ಮ, ಅಧ್ಯಾತ್ಮ, ಆಯುರ್ವೇದ, ಭವಿಷ್ಯ, ಗಣಿತ, ಸಂಗೀತ, ವ್ಯಾಕರಣದ ಭಂಡಾರವೇ ಇದೆ. ತಾಳೆಗರಿಗಳಲ್ಲಿ ಬರಹಗಳಲ್ಲದೆ ಚಿತ್ರಗಳೂ ಇವೆ. ಬಿದಿರಿನ ಹಾಳೆ, ಚರ್ಮ, ಹಳೆಯ ಕಾಗದ, ಮರದ ತೊಗಟೆ, ದಂತದ ಮೇಲಿನ ಬರಹ, ಚಿತ್ರಗಳನ್ನೂ ಪ್ರದರ್ಶನಕ್ಕಿಟ್ಟಿದ್ದಾರೆ.

ಪ್ರವಾಸಿಗರ ಸ್ವರ್ಗ 'ಮಾನವಶಾಸ್ತ್ರ ವಿಭಾಗ'. ಪ್ರಾಚೀನ ಹಾಗೂ ಬುಡಕಟ್ಟು ಜನಾಂಗದವರ ಆಳೆತ್ತರದ ಮೂರ್ತಿಗಳ ಮೂಲಕ ಅವರ ಜನಜೀವನ, ಸಂಸ್ಕೃತಿ, ಕಲೆಯನ್ನು ಪ್ರವಾಸಿಗರಿಗೆ ತಿಳಿಸಲು ಪ್ರಯತ್ನಿಸಿದ್ದಾರೆ. ಮೂರ್ತಿಗಳು, ಮೂರ್ತಿಗಳ ಮುಖದ ಭಾವನೆಗಳು, ಧರಿಸಿದ ಆಭರಣಗಳು, ಉಡುಗೆ–ತೊಡುಗೆ ಅತ್ಯಂತ ಸಹಜವಾಗಿದ್ದು, ಇದು ನಿಜವಲ್ಲ ಎಂದು ಅರಗಿಸಿಕೊಳ್ಳಲು ಸ್ವಲ್ಪ ಹೊತ್ತು ಬೇಕು. ಅವರೊಂದಿಗಿರುವ ವಾದ್ಯಗಳಿಂದ ನಿಜವಾದ ಶಬ್ದಗಳು ಹೊಮ್ಮುತ್ತಿರುವುದು ವಿಶೇಷ.

ಯಾವುದೇ ಭಾಷೆ ಇರಲಿ — ಲಿಪಿಯಲ್ಲೂ ಬಹಳ ಬದಲಾವಣೆಯಾಗಿದೆ. ಒಡಿಶಾದ ಲಿಪಿಯಲ್ಲೂ ಕಳೆದ ಸಹಸ್ರ ವರ್ಷಗಳಲ್ಲಿ ಬಹಳಷ್ಟು ಬದಲಾವಣೆಯಾಗಿದೆ. ಲಿಪಿಯಲ್ಲಾದ ಬದಲಾವಣೆಯನ್ನು ಗುರುತಿಸಿ 'ಶಿಲಾಶಾಸನ ಮತ್ತು ನಾಣ್ಯ ವಿಭಾಗ'ದಲ್ಲಿ ದಾಖಲಿಸಿದ್ದಾರೆ. ಮೌರ್ಯ, ಕುಶಾನ, ಗಂಗಾ, ಗುಪ್ತ, ಯಾದವರ ಕಾಲದ ಚಿನ್ನ, ಬೆಳ್ಳಿ ನಾಣ್ಯಗಳನ್ನು ಪ್ರದರ್ಶನಕ್ಕಿಟ್ಟಿದ್ದಾರೆ.

ಮತ್ತೊಂದು ಆಕರ್ಷಕ ವಿಭಾಗ 'ಕರಕುಶಲ ಕಲೆ'ಯದ್ದು. ಈ ವಿಭಾಗದಲ್ಲಿ ಇಟ್ಟಿರುವ ಮರದ ಮತ್ತು ಮಣ್ಣಿನ ಮೂರ್ತಿಗಳು ಗಮನಸೆಳೆಯುತ್ತವೆ. ನಾಟಕ, ನೃತ್ಯ, ಜಾನಪದ ಕುಣಿತ ಮುಂತಾದ ಸಂದರ್ಭಗಳಲ್ಲಿ ಉಪಯೋಗಿಸುವ ಹಲವು ಬಗೆಯ ಮುಖವಾಡಗಳನ್ನು 'ಮುಖವಾಡ ವಿಭಾಗ'ದಲ್ಲಿ ಪ್ರದರ್ಶನಕ್ಕಿಟ್ಟಿದ್ದಾರೆ. ಒಡಿಶಾ ಖನಿಜಗಳ ಆಗರ. ಇಲ್ಲಿ ಕಬ್ಬಿಣ, ಸೀಸ, ಬಾಕ್ಸೈಟ್ ಧಾರಾಳವಾಗಿ ಸಿಗುತ್ತವೆ. ಗಣಿಗಾರಿಕೆ ಬಗ್ಗೆ ವಿವರಗಳನ್ನು 'ಮೈನಿಂಗ್ ವಿಭಾಗ'ದಲ್ಲಿ ಕೊಟ್ಟಿದ್ದಾರೆ. ಪುಟ್ಟ ಗಣಿಗಾರಿಕೆಯ ಮಾದರಿಯೂ ಇದೆ. ಜ್ಞಾನಾರ್ಜನೆಗೆ ಹೇಳಿ ಮಾಡಿಸಿದ ಜಾಗ, ಕಣ್ಣಿಗೂ ಮನಸ್ಸಿಗೂ ಮುದ ನೀಡುತ್ತದೆ.

## ಕಲೆಯ ಕನ್ನಡಿ 'ಕಲಾಭೂಮಿ'

ಒಡಿಶಾದ ಸಾಂಪ್ರದಾಯಿಕ ಕರಕುಶಲ ಕಲೆಯನ್ನು ಪರಿಚಯಿಸಲೆಂದೇ ಇರುವ ಸಂಗ್ರಹಾಲಯ 'ಕಲಾಭೂಮಿ'. ಸುಮಾರು 12.5 ಎಕರೆ ಜಾಗದಲ್ಲಿರುವ ಮ್ಯೂಸಿಯಂ 2018ರಲ್ಲಿ ಉದ್ಘಾಟನೆಗೊಂಡು ಸಾರ್ವಜನಿಕರಿಗೆ ತೆರೆದುಕೊಂಡಿತು. ಸಂಗ್ರಹಾಲಯದ ಕಟ್ಟಡ ಸಾಂಪ್ರದಾಯಿಕ ಶೈಲಿಯಲ್ಲಿದೆ. ಸುತ್ತ ಇರುವ ಕಹಿಬೇವು, ಹಲಸು, ಮಾವು, ಹೊನ್ನೆ ಮರಗಳಿಂದ ವಾತಾವರಣವು ತಂಪಾಗಿದೆ. ಹಸುರು ಹುಲ್ಲಿನ ಲಾನ್ ಇದ್ದು, ಅಲ್ಲಲ್ಲಿ ಜೋಡಿಸಿರುವ ಮಣ್ಣಿನ ವಿವಿಧ ಆಕಾರದ ಮಡಿಕೆಗಳು ಒಡಿಶಾದ ಸಂಪ್ರದಾಯಕ್ಕೆ ಒತ್ತು ಕೊಟ್ಟು, ಸಂಗ್ರಹಾಲಯಕ್ಕೆ ವಿಶಿಷ್ಟ ಕಳೆ ಕೊಡುತ್ತವೆ. ಒಡಿಶಾದ ಕರಕುಶಲ ಕಲೆಯನ್ನು ಸಾರುವ ಸುಮಾರು 8–10 ಗ್ಯಾಲರಿಗಳಿವೆ. ಸಾಂಪ್ರದಾಯಿಕ ಚಿತ್ರಕಲೆ, ಟೆರ್ರಾಕೋಟಾ, ಕಲ್ಲು, ಮರದ ಕೆತ್ತನೆ, ಲೋಹದ ಕರಕುಶಲ ವಸ್ತುಗಳು, ಪ್ರಾಕೃತಿಕ ಕರಕುಶಲ ವಸ್ತುಗಳು, ಬುಡಕಟ್ಟು ವಸ್ತುಗಳು, ಕೈಮಗ್ಗ, ರೇಷ್ಮೆ ಬಟ್ಟೆಗಳ ತಯಾರಿ, ಸಾಂಪ್ರದಾಯಿಕ ಕಲೆಗಳಲ್ಲಿ ಅರಳಿದ ಪುರಿ ಜಗನ್ನಾಥ ಇವೇ ಅಲ್ಲಿರುವ ಗ್ಯಾಲರಿಗಳು.

'ಟೆರ್ರಾಕೋಟಾ ಗ್ಯಾಲರಿ'ಯಲ್ಲಿ ಮಣ್ಣಿನ ಗೃಹೋಪಯೋಗಿ ವಸ್ತುಗಳು, ಮಣ್ಣಿನ ಆಟದ ಸಾಮಾನುಗಳಿವೆ. 'ಸಾಂಪ್ರದಾಯಿಕ ಚಿತ್ರಕಲೆ' ಗ್ಯಾಲರಿಯಲ್ಲಿ ದೇವರ ಪಟಗಳಿದ್ದು, ಆ ಕಲಾಕೃತಿಗಳಲ್ಲಿ ಗಾಢ ಬಣ್ಣಗಳನ್ನು ಉಪಯೋಗಿಸಲಾಗಿದೆ. ಜೋಡಿಸಿದ ತಾಳೆಗರಿ ಮೇಲೆ ಬರೆದಿರುವ ಚಿತ್ರಗಳೂ ಆಕರ್ಷಕವಾಗಿವೆ. ಆನೆದಂತದಲ್ಲಿ ಮಾಡಿದ ವಸ್ತುಗಳನ್ನೂ ಪ್ರದರ್ಶನಕ್ಕಿಟ್ಟಿದ್ದಾರೆ. ವಿಶಿಷ್ಟ ಆಕಾರದ ತುಳಸಿಕಟ್ಟೆ, ಅದರ ಮೇಲಿನ ಉಬ್ಬುಚಿತ್ರಗಳು ಬಲು ಮೋಹಕ.

'ರೇಷ್ಮೆ ವ್ಯವಸಾಯ'ದ ಗ್ಯಾಲರಿಯಲ್ಲಿ ರೇಷ್ಮೆ ವ್ಯವಸಾಯ ವಿಧಾನಗಳನ್ನು ಬಹಳ ಅಂದವಾಗಿ ಪ್ರದರ್ಶಿಸಿದ್ದಾರೆ. ಹಾಗೆಯೇ ಕೈಮಗ್ಗದ ಬಟ್ಟೆಗಳು ಒಡಿಶಾದ ಸಂಪತ್ತೆಂದರೂ ತಪ್ಪಾಗದು.

ಪುರಿ ಜಗನ್ನಾಥ ದೇವಾಲಯ ವಿಶ್ವ ಪ್ರಸಿದ್ಧ. ಈ ದೇವಾಲಯದ ರಥಯಾತ್ರೆಯೂ ಬಹಳ ಪ್ರಸಿದ್ಧ, ಇದು ಇಲ್ಲಿನ ಜನರ ಹೆಮ್ಮೆಯೂ ಹೌದು. ದೇವರ ವಿವಿಧ ಅಲಂಕಾರ ಮತ್ತು ರಥಯಾತ್ರೆಯ ಪ್ರದರ್ಶನಕ್ಕಾಗಿಯೇ ಗ್ಯಾಲರಿಯೊಂದು ಮೀಸಲಿದೆ. ಗ್ಯಾಲರಿಗಳಲ್ಲದೆ ಕಾರ್ಯಾಗಾರಕ್ಕಾಗಿ ಜಾಗ ಮತ್ತು ಸ್ಮರಣಿಕೆಗಳ ಅಂಗಡಿ ಇದೆ. ಭುವನೇಶ್ವರಕ್ಕೆ ಭೇಟಿ ಕೊಟ್ಟವರು ನೋಡಲೇಬೇಕಾದ ಎರಡು ವಿಶಿಷ್ಟ ವಸ್ತುಸಂಗ್ರಹಾಲಯಗಳಿವು.

ಪ್ರತಿಕ್ರಿಯಿಸಿ: **feedback@sudha.co.in**